


ಮಾಡಿ ಇಡೀ ಚಿತ್ರವನ್ನು ಕೈಗೆ ಬಾಯಿಗೆ ತೆಗೆದುಕೊಂಡು ಬಿಸಿಯುಸಿರು ಬಿಟ್ಟು, ನಗಾಡಿ, ಎಲ್ಲ ಮುಗಿದ ಮೇಲೆ ಶುಭಂ.

* * *

ಆಗ ರಾತ್ರಿ ರಾಣಿಯ ಕಂಪಿನ ಕೈತೋಟದ ಮಲ್ಲಿಗೆ ಚಂದ್ರ ಚಳಿಗೆ ಅಲ್ಲಾಡುತ್ತಿದ್ದಾಗ ಶಾಲು ಹೊದಿಸಿ ಪುಟ್ಟ ಹಕ್ಕಿ ಎಂಬಂತೆ ತನ್ನನ್ನು ಅವಚಿಕೊಂಡಂತೆ ರಸ್ತೆ ಸಾಗಿ ಮನೆ ಉಪ್ಪರಿಗೆಗೆ ಬಂದು, ಸುಪ್ಪತ್ತಿಗೆಯ ಮೃದು ಮೈಯಿನ ಪಲ್ಲಂಗದ ಮೇಲೆ ಮಲಗಿಸಿ, ಆ ಚಿತ್ರದಲ್ಲಿ ನಡೆದದ್ದು ಸುಳ್ಳು, ಇದು ಇಲ್ಲಿ ಈಗ ನಿಜವಾಗುತ್ತಿದೆ ಎಂಬಂತೆ ಮೈಕೈಗಳಿಗೆ ಹೊಸ ಪಾಠ ಕಲಿಸುತ್ತಾ, ಚಂದ್ರನ ಬೆಳಕು ಕಿಟಕಿಯಿಂದ ಹಾದು ಬಂದು ಬಿದ್ದಿದ್ದನ್ನು ನೋಡುತ್ತಲೇ ಕಳೆದ ಆ ರಾತ್ರಿಗಳನ್ನು ಅವಳು ಹೇಗೇ ಮರೆತಾಳು? ಆ ದಿನಗಳು ಆ ರಾತ್ರಿಗಳೆಲ್ಲಾ ಎಲ್ಲಿ ಹೋದವೋ? ಯಾವ ನದಿಯಲ್ಲಿ ಮುಳುಗಿದವೋ? ಯಾವ ಹುತ್ತ ಸೇರಿದವೋ? ಯಾವ ನಾಯಿ ನರಿಯ ಬಾಯಿಗೆ, ಖೂಳ ವ್ಯಾಘ್ರನ ಬಾಯಿಗೆ, ದೆವ್ವದ ಬಾಯಿಗೆ, ಮಾರಿ ಮಸಣಿಯರ ಬಾಯಿಗೆ ಸಿಕ್ಕವೋ ಬಲ್ಲವರಾರು? ಈಗ ಉಳಿದಿರುವುದು ಇಷ್ಟೆ: ಪೌಡರಿನ ಡಬ್ಬಿ, ಮತ್ತು… ●